# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

## 2010 - 2011 ನೇ ಸಾಲಿನ ವಾರ್ಷಿಕ ವರದಿ.

**ಚಿಕ್ಕಮಗಳೂರು ನಗಾರಭಿವೃದ್ಧಿ ಪ್ರಾಧಿಕಾರದ 2010 - 2011 ನೇ ಸಾಲಿನ**
**01-04-2009 ರಿಂದ 31-03-2010 ಮತ್ತು 01-04-2010 ರಿಂದ 31-12-2010 ರವರೆಗಿನ**

## :.:.: ವಾರ್ಷಿಕ ವರದಿ :.:.:

**1. 2010 - 2011 ನೇ ಸಾಲಿನ ಆಯವ್ಯಯ ಅಂದಾಜು ಮತ್ತು ಅದಕ್ಕನುಗುಣವಾಗಿ ವೆಚ್ಚ**

| ಆದಾಯ | ಖರ್ಚು |
|---|---|
| ರೂ. 6,68,18,342=00 | ರೂ. 6,24,19,000=00 |

**01-04-2009 ರಿಂದ 31-03-2010 ರವರೆಗಿನ ಆದಾಯ ಮತ್ತು ಖರ್ಚಿನ ವಿವರ**

| ಆದಾಯ | ಖರ್ಚು |
|---|---|
| ರೂ. 1,64,61,207=00 | ರೂ. 88,08,947=00 |

**2. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ ( ಡಿ. ಸಿ. ಬಿ.)**

–ಇಲ್ಲಾ–

**3. 01-04-2009 ರಿಂದ 31-03-2010 ರವರೆಗಿನ ಪ್ರಗತಿಯ ವರದಿ**

**ಈ ಮುಂದಿನಂತೆ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ.**

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ ಚಪ್ಪಡಿ ಚರಂಡಿ ನಿರ್ಮಾಣ ಕಾಮಗಾರಿ.
2. ಚಿಕ್ಕಮಗಳೂರು ನಗರದ ಗೃಹಮಂಡಳಿ ಬಡಾವಣೆಯಲ್ಲಿರುವ ಆಯುಕ್ತರ ವಸತಿ ಗೃಹಕ್ಕೆ ಹವಮಾನ ನಿರೋಧಕ ಕಾಂಕ್ರೀಟ್ ಹಾಕುವ ಕಾಮಗಾರಿ.
3. ಚಿಕ್ಕಮಗಳೂರು ನಗರದ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಮೂರು ಬಸ್ ಶೆಲ್ಟರ್‌ಗಳಿಗೆ ವಿದ್ಯುದ್ದೀಕರಣ ಕಾಮಗಾರಿ.
   1. ಬೈ–ಪಾಸ್ ರಸ್ತೆಯ ಸಿ. ಯು. ಡಿ. ಎ. ಕಛೇರಿ ಪಕ್ಕದ ಬಸ್ ಶೆಲ್ಟರ್‌ಗೆ ವಿದ್ಯುದ್ದೀಕರಣ ಕಾಮಗಾರಿ.
   2. ಹಿರೇಮಗಳೂರಿನ ಅಂಬೇಡ್ಕರ್ ವೃತ್ತದ ಬಳಿ ಇರುವ ಬಸ್ ಶೆಲ್ಟರ್‌ಗೆ ವಿದ್ಯುದ್ದೀಕರಣ ಕಾಮಗಾರಿ.
   3. ಮೌಂಟೆನ್ಯೂ ಶಾಲೆಯ ಹತ್ತಿರ ಇರುವ ಬಸ್ ನಿಲ್ದಾಣಕ್ಕೆ ವಿದ್ಯುದ್ದೀಕರಣ ಕಾಮಗಾರಿ.

**ಆರ್ಥಿಕ ಪ್ರಗತಿಯ ವಿವರಗಳು**

| | |
|---|---|
| 1. ಚರಂಡಿ ನಿರ್ಮಾಣ ಕಾಮಗಾರಿಗೆ | 5,74,093=00 |
| 2. ಆಯುಕ್ತರ ವಸತಿ ಗೃಹಕ್ಕೆ ಹವಮಾನ ನಿರೋಧಕ ಕಾಂಕ್ರೀಟ್ ಹೊದಿಕೆ ಹಾಕುವುದು | 54,202=00 |
| 3. ಬಸ್ ಶೆಲ್ಟರ್‌ಗಳಿಗೆ ವಿದ್ಯುದ್ದೀಕರಣ | 68,416=00 |
| **ಒಟ್ಟು** | **6,96,711=00** |

ಪುಟ –2– ಕ್ಕೆ

**01-04-2010 ರಿಂದ 31-12-2010 ರವರೆಗಿನ ಪ್ರಗತಿಯ ವರದಿ.**

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ಸೈಜುಕಲ್ಲು ಬಾಕ್ಸ್ ಚರಂಡಿ ಕಾಮಗಾರಿ. ರೂ.1930343=00.
2. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ಆರ್.ಸಿ.ಸಿ. ಡೆಕ್ ಸ್ಲ್ಯಾಬ್ ಮೋರಿ ಕಾಮಗಾರಿ. ರೂ.1309436=00.
3. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ರಸ್ತೆ ನಿರ್ಮಾಣ ಕಾಮಗಾರಿ. ರೂ.1297674=00.
4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ದೀಪಾ ನರ್ಸಿಂಗ್ ಹೋಂ ರಸ್ತೆಯಿಂದ ಬೈ–ಪಾಸ್ ರಸ್ತೆಗೆ ಸೇರುವ ಸಂಪರ್ಕ ರಸ್ತೆ ಕಾಮಗಾರಿ. ರೂ. 525026=00.
5. ಚಿಕ್ಕಮಗಳೂರು ನಗರದ ಮಹಾಯೋಜನೆ (ಪರಿಷ್ಕೃತ–1) ನಕ್ಷೆಯನ್ನು ತಯಾರಿಸಿದ ಕಾಮಗಾರಿಯ ಬಾಬ್ತು. ರೂ. 110000=00.
6. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ ಬಸ್ ತಂಗುದಾಣಗಳಿಗೆ ಮೆಸ್ ಮತ್ತು ಪ್ಲೆಕ್ಸ್ ಬೋರ್ಡ್ ಅಳವಡಿಸಿರುವ ಕಾಮಗಾರಿ. ರೂ. 80000=00.

**ಒಟ್ಟು ರೂ.5252479=00.**

## 4. ತೆಗೆದುಕೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು:–

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಹಿರೇಮಗಳೂರು ವಸತಿ ಬಡಾವಣೆಯ ಒಂದನೇ ಹಂತದಲ್ಲಿ ರೂ. 3.07 ಲಕ್ಷ ವೆಚ್ಚದಲ್ಲಿ ಚಪ್ಪಡಿ ಚರಂಡಿ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಪಟ್ಟಿ ತಯಾರಿಸಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ.
2. ಪ್ರಾಧಿಕಾರದ ಕಛೇರಿಯ ಕಟ್ಟಡ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯಕ್ಕಾಗಿ ರೂ. 0.72 ಲಕ್ಷಗಳ ಕಾಮಗಾರಿ ಪೂರ್ಣಗೊಂಡಿದ್ದು ಬಿಲ್ಲು ಪಾವತಿಸಬೇಕಾಗಿರುತ್ತದೆ.
3. ಚಿಕ್ಕಮಗಳೂರು ನಗರದ ಗಾಂದಿನಗರ ಬಡಾವಣೆಯಲ್ಲಿನ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ರೂ. 12.10 ಲಕ್ಷಗಳ ವೆಚ್ಚದ ಟೆಂಡರ್ ಪ್ರಕ್ರಿಯೇ ಪ್ರಗತಿಯಲ್ಲಿರುತ್ತದೆ, ಹಾಗೆಯೇ ಕೆ. ಹೆಚ್. ಬಿ. ಬಡಾವಣೆಯಲ್ಲಿ ಒಂದು ಉದ್ಯಾನವನ ಕ್ಕೆ ರೂ.7.00 ಲಕ್ಷಗಳು ಹಾಗೂ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ ಎರಡು ಉದ್ಯಾನವನವನ್ನು ಅಭಿವೃದ್ಧಿಪಡಿಸಲು ರೂ.45.00 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿಕೊಂಡು ಕಾಮಗಾರಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಿಳಿಕೆರೆ – ತರೀಕೆರೆ ರಾಜ್ಯ ಹೆದ್ದಾರಿ ರಸ್ತೆಯ ಮೌಂಟೆನ್ಯೂ ಶಾಲೆ ಹತ್ತಿರ ಸ್ವಾಗತ ಕಮಾನು ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
5. ಚಿಕ್ಕಮಗಳೂರು ನಗರದ ಹಿರೇಮಗಳೂರು ಕೆರೆಯಲ್ಲಿ ವಾಟರ್ ಪಾರ್ಕ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿತ್ತು, ಇದಕ್ಕೆ ಸಂಬಂದಿಸಿದಂತೆ ಸರ್ಕಾರದ ಪೂರ್ವಾನುಮೋದನೆ ಕೋರಿ ಪತ್ರ ಬರೆಯಲಾಗಿದ್ದು ಸರ್ಕಾರದ ಅನುಮತಿ ದೊರಕಿರುವುದಿಲ್ಲ.

ಪುಟ 3 ಕ್ಕೆ

6. ತೇಗೂರು ಗ್ರಾಮದ ಸರ್ವೆ ನಂ. 110 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 110 ಎಕರೆ ಜಮೀನಿನಲ್ಲಿ ಹೊಸದಾಗಿ ನಿವೇಶನ ಯೋಜನೆ ರೂಪಿಸಲು ಕರ್ನಾಟಕ ನಗರಾಬಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 5(1) (ಬಿ) ರ ಅನ್ವಯ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಇದಕ್ಕೆ ಸರ್ಕಾರವು ಪೂರ್ವಾನುಮೋದನೆ ನೀಡಿರುತ್ತದೆ ಸದರಿ ಬಡಾವಣೆ ಅಭಿವೃದ್ದಿಗೆ ಸಾರ್ವಜನಿಕರು ಸಹಕರಿಸುತ್ತಿಲ್ಲವಾದ್ದರಿಂದ ಸ್ಥಗಿತಗೊಂಡಿರುತ್ತದೆ.

## 5. <u>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳ ಪ್ರಗತಿ.</u>

ಇದು ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮ–1991 ರ, ಅನ್ವಯ ನಿವೇಶನ ಹಂಚಿಕೆ ಸಮಯದಲ್ಲಿ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಿಯಾಯಿತಿ ದರದಲ್ಲಿ ನಿವೇಶನ ಹಂಚಿಕೆ ಮಾಡಿ ನಿಯಮದಂತೆ ಮೀಸಲಿಡಲು ಕ್ರಮ ಕೈಗೊಳ್ಳಲಾಗಿದೆ, ಆಯ್ಕೆಯ ಯಾವುದೇ ಅಂತಿಮ ಪಟ್ಟಿ ಆಗಿರುವುದಿಲ್ಲ.

## 6. <u>ವಿಶೇಷ ಘಟಕ ಯೋಜನೆ : ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು.</u>

ಇದು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ,

## 7. <u>ಕೇಂದ್ರ ಪುರಸ್ಕೃತ : ವಿದೇಶಿ ನೆರವಿನ ಯೋಜನೆಗಳ ವಿವರಗಳು</u>

ಪ್ರಾದಿಕಾರಕ್ಕೆ ಕೇಂದ್ರದಿಂದ ಪುರಸ್ಕೃತ ಯೋಜನೆ ಇರುವುದಿಲ್ಲ ಹಾಗೂ ಯಾವುದೇ ಯೋಜನೆಗಳಿಗೆ ಕೇಂದ್ರದ ನೆರವು ದೊರಕಿರುವುದಿಲ್ಲ.

## 8. <u>ಇತರೆ ಯೋಜನೆಗಳ ವಿವರಗಳು</u>

1. ಚಿಕ್ಕಮಗಳೂರು ನಗರದ ಮಹಾ ಯೋಜನೆ (ಪರಿಷ್ಕೃತ) (ಸಿ. ಡಿ. ಪಿ.) ನಕ್ಷೆಗೆ ಸರ್ಕಾರವು ಅಂತಿಮ ಅನುಮೋದನೆ ನೀಡಿದ್ದು, ಅದರಂತೆ ಕಾರ್ಯನಿರ್ವಹಣೆ ನಡೆಯುತ್ತದೆ.

## ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 01-01-2010 ರಿಂದ 31-03-2011 ರವರೆಗೆ ತೆಗೆದುಕೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಯೋಜನೆಗಳ ವಿವರ:

1. ಚಿಕ್ಕಮಗಳೂರು ನಗರದ ಉಪ್ಪಳ್ಳಿ – ಇಂದಾವರ ಗ್ರಾಮಗಳ ವಿವಿದ ಸರ್ವೆ ನಂಬರುಗಳಲ್ಲಿನ ಒಟ್ಟು 200 ಎಕರೆ ಭೂಮಿಯನ್ನು ಭೂಮಾಲೀಕರು / ರೈತರಿಂದ 40 : 60 ರ ಯೋಜನೆಯಡಿಯಲ್ಲಿ ವಸತಿ ಬಡಾವಣೆ ನಿರ್ಮಾಣ ಮಾಡಲು ಜಮೀನನ್ನು ನೋಂದಣಿ ಮಾಡಿಕೊಳ್ಳುವ ಕಾರ್ಯ ತೀವ್ರ ಪ್ರಗತಿಯಲ್ಲಿರುತ್ತದೆ, ನೋಂದಣಿ ಕಾರ್ಯ ಮುಗಿದ ನಂತರ ನಿಯಮಾನುಸಾರ ನಕ್ಷೆಯನ್ನು ತಯಾರಿಸಿ ನಿಯಮಾನುಸಾರ ಸಿವಿಲ್ ಕಾಮಗಾರಿಗಳನ್ನು ನಿರ್ಮಿಸಲು ಪ್ರಕ್ರಿಯೆ ಪ್ರಾರಂಭಿಸಲಾಗುವುದು, 2011 – 12 ನೇ ಸಾಲಿನಲ್ಲಿ ಸದರಿ ಬಡಾವಣೆ ರಚನೆಯಾಗುವುದರಿಂದ ಸುಮಾರು 12.00 ಕೋಟಿ ನಿವ್ವಳ ಆದಾಯ ನಿರೀಕ್ಷಿಸಲಾಗಿದೆ, (ಬಡಾವಣೆ ರಚನೆಯಿಂದ ಒಟ್ಟು ಆದಾಯ ರೂ.72.00 ಕೋಟಿ ಒಟ್ಟು ಖರ್ಚು ರೂ. 60.00 ಕೋಟಿ).

ಪುಟ 4 ಕ್ಕೆ

2. ಆಯುಕ್ತರ ಕಛೇರಿಯ ಕೊಠಡಿಯಲ್ಲಿ ಶೌಚಾಲಯ ನಿರ್ಮಾಣದ ಕಾಮಗಾರಿಗೆ ರೂ. 65000=00 ಗಳ ಅಂದಾಜು ಮಂಜೂರಾಗಿದ್ದು ನಿಯಮಾನುಸಾರ ಕಾಮಗಾರಿ ಕೈಗೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
3. ಚಿಕ್ಕಮಗಳೂರು ನಗರದ ಮಹಾಯೋಜನಾ ನಕ್ಷೆಯಲ್ಲಿ ಗುರುತಿಸಿರುವ ಮುಖ್ಯವಾದ 60 ಅಡಿ ರಸ್ತೆಗಳನ್ನು ಸಾರ್ವಜನಿಕರು ಮತ್ತು ಪ್ರಾಧಿಕಾರದ ಜಂಟಿ ಯೋಜನೆಯಲ್ಲಿ ನಿರ್ವಹಿಸಲು ಯೋಜಿಸಲಾಗಿದೆ.
4. ಚಿಕ್ಕಮಗಳೂರು ನಗರದ ಮಾಸ್ಟರ್ ಪ್ಲಾನ್‌ನಲ್ಲಿ ಗುರುತಿಸಿರುವ ಕೆಲವು ಉದ್ಯಾನವನದ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಯೋಜಿಸಲಾಗಿದೆ.
5. ಚಿಕ್ಕಮಗಳೂರು ನಗರದ ಮಧ್ಯಭಾಗದಲ್ಲಿರುವ ಬಸವನಹಳ್ಳಿ ಕೆರೆಯ ಮಧ್ಯಭಾಗದಲ್ಲಿ ಜಿಲ್ಲಾಡಳತದ ವತಿಯಿಂದ ದ್ವೀಪವನ್ನು ನಿರ್ಮಿಸಲಾಗಿದೆ, ನಗರಾಭಿವೃದ್ಧಿ ಪ್ರಾಧಿಕಾರವು ಸದರಿ ದ್ವೀಪಕ್ಕೆ ಹೋಗಲು ಒಂದು ತೂಗು ಸೇತುವೆ ನಿರ್ಮಾಣ ಮಾಡಿ ದ್ವೀಪದಲ್ಲಿ ವಿವೇಕಾನಂದ ಸ್ಮಾರಕ ನಿರ್ಮಾಣ ಮಾಡಿ ಸಾರ್ವಜನಿಕರ ಮನರಂಜನೆ ಮತ್ತು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.
6. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ಹೆಚ್ಚುವರಿ ವಸತಿ ಬಡಾವಣೆಯಲ್ಲಿ ರೂ. 28.76 ಲಕ್ಷಗಳ ವೆಚ್ಚದಲ್ಲಿ ಚಪ್ಪಡಿ ಚರಂಡಿ ಕಾಮಗಾರಿ ರೂ. 64.06 ಲಕ್ಷಗಳ ವೆಚ್ಚದಲ್ಲಿ ಸೈಜುಕಲ್ಲು ಬಾಕ್ಸ್ ಚರಂಡಿ ಕಾಮಗಾರಿ, ರೂ. 35.30 ಲಕ್ಷಗಳ ವೆಚ್ಚದಲ್ಲಿ ಆರ್. ಸಿ. ಸಿ. ಡೆಕ್ ಸ್ಲ್ಯಾಬ್ ಮೋರಿ ಮತ್ತು ಆರ್. ಸಿ. ಸಿ. ಹ್ಯೋಂ ಪೈಪ್ ಮೋರಿ ನಿರ್ಮಾಣ ಕಾಮಗಾರಿ, ಹಾಗೂ ರೂ. 50.20 ಲಕ್ಷಗಳ ವೆಚ್ಚದಲ್ಲಿ ಜಲ್ಲಿ ರಸ್ತೆ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದ್ದು ಭಾಗಶಃ ಬಿಲ್ಲುಗಳು ಪಾವತಿಯಾಗಿದ್ದು ಅಂತಿಮ ಬಿಲ್ಲುಗಳು ಪಾವತಿಯಾಗಬೇಕಾಗಿರುತ್ತದೆ.

ಹಿರೇಮಗಳೂರು ಹೆಚ್ಚುವರಿ ವಸತಿ ಬಡಾವಣೆಯಲ್ಲಿನ 17 ಎಕರೆ 37½ ಗುಂಟೆ ಪ್ರದೇಶದಲ್ಲಿನ 3 – 4 ಜನ ಭೂ ಮಾಲೀಕರುಗಳು ಘನ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ತಡೆಯಾಜ್ಞೆ ತಂದಿರುವ ಕಾರಣ ಸುಮಾರು 4.0 ಎಕರೆ ಜಾಗದಲ್ಲಿ ವಸತಿ ಬಡಾವಣೆ ನಿರ್ಮಾಣ ಕಾರ್ಯ ಸ್ಥಗಿತಗೊಳಿಸಿ ಪ್ರಕರಣಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ, ತೆರೆವುಗೊಂಡ ನಂತರ ಪೂರ್ಣವಾಗಿ ಬಡಾವಣೆ ರಚನೆ ಕಾರ್ಯ ಪೂರ್ಣಗೊಳಿಸಲಾಗುತ್ತದೆ.

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.